# ಕ.ವಿ.ಪ್ರ.ನಿ.ನಿ. ಮತ್ತು ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್

# KPTCL AND ESCOMs PENSION AND GRATUITY TRUSTS

Ph No. 080-22291150
Fax No. 080-22223558
E-mail: pgtrustkptcl@yahoo.com

6th Floor,
Kaveri Bhavan,
Bangalore-560009.


ಸಂಖ್ಯೆ: ಕೆಇಪಿಜಿಟಿ/ಪಿ19/2015-16/ CYS-48 ದಿನಾಂಕ: 12 JUN 2015

ಗೆ,

ಎಲ್ಲಾ ಕಾರ್ಯ ನಿರ್ವಾಹಕ ಇಂಜಿನಿಯರ್,
ಕಾರ್ಯ ಮತ್ತು ಪಾಲನಾ ವಿಭಾಗ,
ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ/
MRS ಶಿವಮೊಗ್ಗ, ಕವಿಪ್ರನಿನಿ,
ವ್ಯವಸ್ಥಾಪಕರು(ನಗದು & ಲೆಕ್ಕಗಳು),
ಕವಿಪ್ರನಿನಿ, ಕಾವೇರಿ ಭವನ,
ಬೆಂಗಳೂರು.

ಮಾನ್ಯರೇ,

ವಿಷಯ: ಪ್ರತಿ ಮಾಹೆಯ ಪಿಂಚಣಿ ನಿಧಿ ಕೋರಿಕೆಯನ್ನು ಸಲ್ಲಿಸುವ ಜೊತೆಯಲ್ಲಿ ಪಿಂಚಣಿದಾರ/ಕುಟುಂಬ ಪಿಂಚಣಿದಾರವಾರು ವಿವರಣೆ ನೀಡುವ ಕುರಿತು.

ಉಲ್ಲೇಖ:1. ಈ ಕಛೇರಿ ಸುತ್ತೋಲೆ ಸಂಖ್ಯೆ ಕೆಇಪಿಜಿಟಿ/ಕೆಸಿಒ123/2012-13/ಸಿವೈಎಸ್-34 ದಿನಾಂಕ 12.12.2012.
2. ಈ ಕಛೇರಿ ಸುತ್ತೋಲೆ ಸಂಖ್ಯೆ ಕೆಇಪಿಜಿಟಿ/ಕೆಸಿಒ123/2013-14/ಸಿವೈಎಸ್-11 ದಿನಾಂಕ 11.06.2013.
3. ಸರ್ಕಾರದ ಪತ್ರ ಸಂಖ್ಯೆ ಇಎನ್ 39 ಪಿಎಸ್ಆರ್ 2014 ದಿನಾಂಕ 10.04.2015.

*********

ಉಲ್ಲೇಖ-1 & 2ರಲ್ಲಿನ ಸುತ್ತೋಲೆಗಳಲ್ಲಿ ಪ್ರತಿ ಮಾಹೆಯ ಪಿಂಚಣಿ ನಿಧಿ ಕೋರಿಕೆಯಲ್ಲಿ ಸರ್ಕಾರ ಭರಿಸಬೇಕಾದ ಭಾಗದ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತ ಮತ್ತು ಕಂಪನಿ ಭರಿಸಬೇಕಾದ ಭಾಗದ ಪಿಂಚಣಿ/ಕುಟುಂಬ ಪಿಂಚಣಿ ಮೊತ್ತದ ವಿವರಗಳನ್ನು ಒದಗಿಸುವಂತೆ ಕೋರಲಾಗಿತ್ತು.

ಉಲ್ಲೇಖ-3ರ ಪತ್ರದಲ್ಲಿ ಸರ್ಕಾರವು ಪ್ರತಿಯೊಬ್ಬ ಪಿಂಚಣಿದಾರರ ಪಿಂಚಣಿ ವಿವರಗಳನ್ನು ಸಲ್ಲಿಸಲು ಸೂಚಿಸಿರುವರು. ಈ ಹಿನ್ನೆಲೆಯಲ್ಲಿ, ಜೂನ್ 2015ರ ಮಾಹೆಯಿಂದ ಪಿಂಚಣಿ ನಿಧಿ ಕೋರಿಕೆ ಪಟ್ಟಿಯನ್ನು ಸಲ್ಲಿಸುವಾಗ ಪ್ರತಿ ಪಿಂಚಣಿದಾರ/ಕುಟುಂಬ ಪಿಂಚಣಿದಾರರಿಗೆ ನೀಡಲಾಗುವ ಪಿಂಚಣಿ/ಕುಟುಂಬ ಪಿಂಚಣಿ ವಿವರಗಳನ್ನು ಸರ್ಕಾರದ ಭಾಗ ಹಾಗೂ ಕಂಪನಿಯ ಭಾಗದ ವಿವರಗಳೊಂದಿಗೆ ಒಟ್ಟು ನಿಧಿ ಕೋರಿಕೆಗೆ ತಾಳೆ ಮಾಡಿ ಲಗತ್ತಿಸಿರುವ ವಿವರಣಾ ಪಟ್ಟಿಯ ನಮೂನೆಯಲ್ಲಿ **ಮೃದು ಪ್ರತಿ (MS Excel ಕಡತ) ಯಲ್ಲಿ ಮಾತ್ರ ಕಡ್ಡಾಯವಾಗಿ, ಟ್ರಸ್ಟ್‌ನ ಈ-ಮೇಲ್ ವಿಳಾಸ pgtrustkptcl@gmail.com ಗೆ ಸಲ್ಲಿಸಲು ಕೋರಲಾಗಿದೆ.**

ಮುಂದುವರೆದು, ಪ್ರತಿ ಮಾಹೆ ಪಿಂಚಣಿ ನಿಧಿ ಕೋರಿಕೆಯನ್ನು ಸಲ್ಲಿಸುವಾಗ ಮೇಲೆ ಕೋರಿರುವ ಮಾಹಿತಿಯನ್ನು ತಪ್ಪದೇ **ಮೃದು ಪ್ರತಿಯಲ್ಲಿ (MS Excel ಕಡತ) ಮಾತ್ರ** ಈ-ಮೇಲ್ ಮುಖಾಂತರ ಈ ಕಛೇರಿಗೆ ಸಲ್ಲಿಸುವಂತೆ ಕೋರಲು ನಿರ್ದೇಶಿತನಾಗಿದ್ದೇನೆ. ಸರ್ಕಾರವು ಅಪೇಕ್ಷಿಸಿರುವ ಮಾಹಿತಿಯನ್ನು ನೀಡದಿದ್ದಲ್ಲಿ, ಪ್ರತಿ ಮಾಹೆಯ ನಿಧಿಯನ್ನು ಬಿಡುಗಡೆ ಮಾಡಲಾಗುವುದಿಲ್ಲ. ಈ ಕಾರಣದಿಂದ ಆಗುವ ಅನಾನುಕೂಲಕ್ಕೆ ಸಂಬಂಧಿಸಿದ ಕಛೇರಿಯವರೇ ಹೊಣೆಗಾರರಾಗುತ್ತಾರೆ ಎಂಬುದನ್ನು ಎಚ್ಚರಿಸುವಂತೆ ನಿರ್ದೇಶಿಸಲ್ಪಟ್ಟಿದ್ದೇನೆ.

ತಮ್ಮ ವಿಶ್ವಾಸಿ,

12/6/15

ನಿಯಂತ್ರಣಾಧಿಕಾರಿ & ವ್ಯವಸ್ಥಾಪಕ ಟ್ರಸ್ಟಿ(ಪ್ರಭಾರ),
ಕವಿಪ್ರನಿನಿ/ವಿಸಕಂಗಳ ಪಿಂಚಣಿ ಮತ್ತು ಉಪದಾನ ಟ್ರಸ್ಟ್.

ಪ್ರತಿ ಅವಗಾಹನೆಗಾಗಿ:

1. ನಿರ್ದೇಶಕರು(ಹಣಕಾಸು), ಕವಿಪ್ರನಿನಿ & ಅಧ್ಯಕ್ಷರು ಪಿಂಚಣಿ & ಉಪದಾನ ಟ್ರಸ್ಟ್‌ರವರ ಆಪ್ತ ಕಾರ್ಯದರ್ಶಿ.
2. ಎಲ್ಲಾ ಆರ್ಥಿಕ ಸಲಹೆಗಾರರು, ಕವಿಪ್ರನಿನಿ/ಬೆವಿಕಂ/ಚಾವಿಸನಿ/ಗುವಿಕಂ/ಹುವಿಕಂ/ಮವಿಕಂ ರವರಿಗೆ ತಮ್ಮ ವ್ಯಾಪ್ತಿಯ ಪಿಂಚಣಿ ಬಟವಾಡೆ ಲೆಕ್ಕ ಘಟಕಗಳಿಗೆ ಸೂಕ್ತ ನಿರ್ದೇಶನ ನೀಡಲು ಕೋರಲಾಗಿದೆ.

## Statement showing the details of Pensioners/Family Pensioners for the month of ..............................

| Sl No. | Name of the Pensioner/ Family pensioner | RPAR No | PPO No & Date | Date of Entry into Service | Date of Retirement | Pension Amt | | Family Pension Amt | | Total | | Grand Total |
|---|---|---|---|---|---|---|---|---|---|---|---|---|
| | | | | | | Gok portion | Company portion | Gok portion | Company portion | Gok portion | Company portion | |
| 1 | 2 | 4 | 5 | 6 | 7 | 8 | 9 | 10 | 11 | (8+10) | (9+11) | |
| | | | | | | | | | | | | |
| | | | | | | | | | | | | |
| | | | | | | | | | | | | |
| | | | | | | | | | | | | |

Asst. Accounts Officer

Accounts Officer

"Verified"

Accounts Officer(I/A)